# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/163/2021–22

ಜ್ಞಾನ ಭಾರತಿ,
ಬೆಂಗಳೂರು–560 056
ದಿನಾಂಕ: 24.02.2022

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560 056.

**ಮಾನ್ಯರೇ,**

**ವಿಷಯ:** 163ನೇ ಸಿಂಡಿಕೇಟ್ ಸಭೆಯ ನಡಾವಳಿಗಳು
**ಉಲ್ಲೇಖ:** 1. ವಿಶ್ವವಿದ್ಯಾಲಯದ ಸಮ ಸಂಖ್ಯೆಯ ಪತ್ರ ದಿನಾಂಕ: 09.02.2022.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23.02.2022.

******

ವಿಶ್ವವಿದ್ಯಾಲಯದ ಸಮ ಸಂಖ್ಯೆಯ ಪತ್ರ ದಿನಾಂಕ: 09.02.2022ರಲ್ಲಿ ತಿಳಿಸಲಾಗಿರುವಂತೆ, 163ನೇ ಸಿಂಡಿಕೇಟ್ ಸಭೆಯ ಅಂತಿಮಗೊಳಿಸಲಾದ ಕ್ರೋಢೀಕೃತ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸಲಾಗಿದೆ.

ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

**ಕುಲಸಚಿವರು**

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/163/ಸಾ.ಸ/2021-22

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 23-02-2022

**ದಿನಾಂಕ 09-02-2022 ರಂದು ಜರುಗಿದ 163ನೇ ಸಿಂಡಿಕೇಟ್ ಸಭೆಯ ಅಂತಿಮ ಕ್ರೋಢೀಕೃತ ನಡಾವಳಿಗಳು**

ದಿನಾಂಕ 09-02-2022 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ 163ನೇ ಸಿಂಡಿಕೇಟ್ ಸಭೆಯಲ್ಲಿ ಮಂಡಿತವಾಗಿದ್ದ ಯಾವುದೇ ಕಾರ್ಯಸೂಚಿಗಳನ್ನು ಚರ್ಚಿಸಲು ಕೆಲವು ಸದಸ್ಯರುಗಳು ಅವಕಾಶ ನೀಡದ ಕಾರಣ ಹಾಗೂ ತುಂಬಾ ದಿನಗಳಿಂದ ಬಾಕಿ ಇರುವ ಕಾರ್ಯಸೂಚಿಗಳಿಗೆ ಸಿಂಡಿಕೇಟ್ ಅನುಮೋದನೆ ಇಲ್ಲದೆ, ಅಭಿವೃದ್ಧಿ ಹಾಗೂ ಬೆಳವಣಿಗೆ ಕುಂಟಿತವಾಗಿತ್ತು ಹಾಗಾಗಿ ಸದರಿ ಸಭೆಯಲ್ಲಿ ಮಂಡಿತವಾಗಿದ್ದ ದಿನಾಂಕ: 18-01-2022ರ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಅನುಸಮರ್ಥನೆ ಕುರಿತು ಹಾಗೂ ಕಾರ್ಯಸೂಚಿ ಸಂಖ್ಯೆ 01 ರಿಂದ 87ರ ವಿಷಯಗಳ ಬಗ್ಗೆ ಸದಸ್ಯರುಗಳು ಏಳು ದಿವಸಗಳ ಒಳಗಾಗಿ ಸದರಿ ವಿಷಯಗಳ ಬಗ್ಗೆ ತಮ್ಮ ಅನುಮೋದನೆ/ಅಭಿಪ್ರಾಯ ಅಥವಾ ಅಸಮ್ಮತಿ ಯಾವುದಿದೆ ಅದನ್ನು ಪತ್ರದ ಮೂಲಕ ಕಳುಹಿಸಬೇಕೆಂದು, ಏಳು ದಿನಗಳ ಒಳಗಾಗಿ ಸದಸ್ಯರುಗಳಿಂದ ಯಾವುದೇ ಉತ್ತರ ಬಾರದಿದ್ದಲ್ಲಿ, ಮೇಲ್ಕಂಡ ಕಾರ್ಯಸೂಚಿಗಳಿಗೆ ಸದಸ್ಯರ ಅನುಮೋದನೆ ಇದೆ ಎಂದು ಭಾವಿಸಲಾಗುವುದು ಹಾಗೂ ಸದಸ್ಯರು ಕಳುಹಿಸುವ ಅನುಮೋದನೆ / ಅಭಿಪ್ರಾಯವನ್ನು ಕ್ರೋಢೀಕರಿಸಿ ಬಹುಮತದ ಆಧಾರದ ಮೇಲೆ ನಡಾವಳಿಯನ್ನು ಸಿದ್ಧಪಡಿಸಿ ಅಂತಿಮಗೊಳಿಸಲಾಗುವುದೆಂದು ಸಭೆಯಲ್ಲೆ ಸದಸ್ಯರಿಗೆ ತಿಳಿಸಲಾಗಿರುತ್ತದೆ.

ಕಳೆದ ಸುಮಾರು ಒಂದುವರೆ ವರ್ಷದಿಂದ ಇಲ್ಲಿಯವರೆವಿಗೂ ನಡೆದ ಸಿಂಡಿಕೇಟ್ ಸಭೆಗಳಲ್ಲಿ, ಅಂದರೆ 153ನೇ ಸಿಂಡಿಕೇಟ್ ಸಭೆ ದಿನಾಂಕ: 20.08.2020, 154ನೇ ಸಿಂಡಿಕೇಟ್ ಸಭೆ ದಿನಾಂಕ: 10.09.2020, 155ನೇ (ಆನ್‌ಲೈನ್) ಸಿಂಡಿಕೇಟ್ ಸಭೆ ದಿನಾಂಕ: 18.12.2020, 155ನೇ ಮುಂದೂಡಲಾದ ಸಿಂಡಿಕೇಟ್ ಸಭೆ ದಿನಾಂಕ: 05.01.2021, 156ನೇ ಸಿಂಡಿಕೇಟ್ ಸಭೆ ದಿನಾಂಕ: 20.02.2021, 157ನೇ ಸಿಂಡಿಕೇಟ್ ಸಭೆ ದಿನಾಂಕ: 24.03.2021, ವಿಶೇಷ ಸಿಂಡಿಕೇಟ್ ಸಭೆ ದಿನಾಂಕ: 04.05.2021, 158ನೇ ಸಿಂಡಿಕೇಟ್ ಸಭೆ ದಿನಾಂಕ: 19.05.2021, 158ನೇ ಮುಂದೂಡಲಾದ ಸಿಂಡಿಕೇಟ್ ಸಭೆ ದಿನಾಂಕ: 14.07.2021, 159ನೇ ಸಿಂಡಿಕೇಟ್ ಸಭೆ ದಿನಾಂಕ: 04.08.2021, 160ನೇ ಸಿಂಡಿಕೇಟ್ ಸಭೆ ದಿನಾಂಕ: 14.09.2021, ವಿಶೇಷ ಸಿಂಡಿಕೇಟ್ ಸಭೆ ದಿನಾಂಕ: 12.10.2021, 161ನೇ ಸಿಂಡಿಕೇಟ್ ಸಭೆ ದಿನಾಂಕ: 09.11.2021, 161ನೇ ಮುಂದೂಡಲಾದ ಸಭೆ ದಿನಾಂಕ: 17.11.2021, 162ನೇ ಸಿಂಡಿಕೇಟ್ ಸಭೆ ದಿನಾಂಕ: 11.01.2022, ವಿಶೇಷ ಸಿಂಡಿಕೇಟ್ ಸಭೆ ದಿನಾಂಕ: 18.01.2022, 162 ಮುಂದೂಡಲಾದ ಸಿಂಡಿಕೇಟ್ ಸಭೆ ದಿನಾಂಕ: 19.01.2022, ರಲ್ಲಿ ಮಂಡಿತವಾಗಿದ್ದ ಎಲ್ಲಾ ಕಾರ್ಯಸೂಚಿಗಳ ಮೇಲೆ ಚರ್ಚಿಸಿದೆ, ಕಾರ್ಯಸೂಚಿಗಳನ್ನು ಮುಂದೂಡುತ್ತಾ ಬರಲಾಗಿದೆ ಹಾಗೂ ಕಳೆದ ಮೂರು ಸಿಂಡಿಕೇಟ್ ಸಭೆಗಳಲ್ಲಿ ಯಾವುದೇ ಕಾರ್ಯಸೂಚಿಯನ್ನು ಚರ್ಚಿಸಿರುವುದಿಲ್ಲ. ಇದರಿಂದಾಗಿ ವಿಶ್ವವಿದ್ಯಾಲಯದ ದಿನನಿತ್ಯ ಶೈಕ್ಷಣಿಕ ಕಾರ್ಯಗಳಿಗೆ ಹಾಗೂ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಕಾರಣದಿಂದಾಗಿ ಈ ನಿರ್ಣಯಕ್ಕೆ ಬರಲಾಗಿತ್ತು.

ಅದರಂತೆ ವಿಶ್ವವಿದ್ಯಾಲಯ ಪತ್ರ ಸಂಖ್ಯೆ: ಎಸ್‌ವೈಎನ್/ಎಸ್1/163/2021-22 ದಿನಾಂಕ 9.2.2022 ರ ಮೂಲಕ ಮೇಲ್ಕಂಡ ಸಭೆಯಲ್ಲಿ ನಡೆದ ಚರ್ಚೆ/ಬೆಳವಣಿಗೆಗಳನ್ನೊಳಗೊಂಡ ಕರಡು ನಡಾವಳಿಗಳನ್ನು ಕಳುಹಿಸಿ,

ಸದರಿ ಸಭೆಯಲ್ಲಿ ಮಂಡಿತವಾಗಿದ್ದ ದಿನಾಂಕ 18.01.2022ರ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಅನುಸಮರ್ಥನೆ ಕುರಿತು ಮತ್ತು 163ನೇ ಸಿಂಡಿಕೇಟ್ ಸಭೆಯಲ್ಲಿ ಮಂಡಿತವಾಗಿದ್ದ ಕಾರ್ಯಸೂಚಿ ಸಂಖ್ಯೆ 01 ರಿಂದ 87ರ ವಿಷಯಗಳ ಬಗ್ಗೆ (ಈಗಾಗಲೇ ಸ್ಥಿರೀಕರಿಸಿದ ವಿಷಯಗಳನ್ನು ಹೊರತುಪಡಿಸಿ ಉಳಿದ ವಿಷಯಗಳ ಬಗ್ಗೆ) ಸದಸ್ಯರುಗಳು ಏಳು ದಿವಸಗಳ ಒಳಗಾಗಿ ಸದರಿ ವಿಷಯಗಳ ಬಗ್ಗೆ ತಮ್ಮ ಅನುಮೋದನೆ/ಅಭಿಪ್ರಾಯ ಅಥವಾ ಅಸಮ್ಮತಿ ಯಾವುದಿದೆ ಅದನ್ನು ಪತ್ರದ ಮೂಲಕ ಕಳುಹಿಸಿಕೊಡಬೇಕೆಂದು ಕೋರಲಾಗಿತ್ತು.

ಅಂತೆಯೇ ಸದಸ್ಯರುಗಳು ಕಾರ್ಯಸೂಚಿಗಳಿಗೆ ತಮ್ಮ ಅನುಮೋದನೆ / ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ. 09 (ಒಂಭತ್ತು) ಜನ ಸಿಂಡಿಕೇಟ್ ಸದಸ್ಯರುಗಳು 18-01-2022ರ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯ ಅನುಸಮರ್ಥನೆಗೆ ಹಾಗೂ ದಿನಾಂಕ: 09-02-2022ರಂದು ಜರುಗಿದ 163ನೇ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದ ಕಾರ್ಯಸೂಚಿಯ ಅನುಮೋದನೆಗೆ ತಮ್ಮ ಒಪ್ಪಿಗೆ ಇದೆ ಎಂದು, 07 (ಏಳು) ಜನ ಸಿಂಡಿಕೇಟ್ ಸದಸ್ಯರು ಸದರಿ ವಿಷಯಗಳ ಅನುಮೋದನೆಗೆ ತಮ್ಮ ಆಕ್ಷೇಪಣೆ ಇದೆ, ಅವುಗಳನ್ನು ಚರ್ಚಿಸಲು ಸಭೆ ಕರೆಯಬೇಕೆಂದು ತಿಳಿಸಿರುತ್ತಾರೆ ಹಾಗೂ ಇತರ ಸದಸ್ಯರುಗಳು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿರುವುದಿಲ್ಲ. ಈಗಾಗಲೇ ತಿಳಿಸಿರುವಂತೆ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಎಸ್‌ವೈಎನ್/ಎಸ್1/163/2021-22 ದಿನಾಂಕ: 09.02.2022ರಲ್ಲಿ, ಏಳು ದಿನಗಳ ಒಳಗಾಗಿ ಸದಸ್ಯರುಗಳಿಂದ ಯಾವುದೇ ಉತ್ತರ ಬಾರದಿದ್ದಲ್ಲಿ, ಮೇಲ್ಕಂಡ ಕಾರ್ಯಸೂಚಿಗಳಿಗೆ ಸದಸ್ಯರ ಅನುಮೋದನೆ ಇದೆ ಎಂದು ಭಾವಿಸಲಾಗುವುದು ಎಂದು ತಿಳಿಸಲಾಗಿತ್ತು. ಹಾಗಾಗಿ ಸಿಂಡಿಕೇಟ್ ಒಟ್ಟು 22 ಸಿಂಡಿಕೇಟ್ ಸದಸ್ಯರ ಪೈಕಿ ಏಳು ಜನ ಸಿಂಡಿಕೇಟ್ ಸದಸ್ಯರು ಮಾತ್ರ ಮೇಲ್ಕಂಡ ವಿಷಯಗಳಿಗೆ ತಮ್ಮ ಆಕ್ಷೇಪಣೆ ವ್ಯಕ್ತಪಡಿಸಿರುವುದರಿಂದ, ಸದರಿ ವಿಷಯಗಳ ಅನುಮೋದನೆಗೆ ಬಹುಮತ ಇರುವುದರಿಂದ ಈ ಕೆಳಕಂಡ ವಿಷಯ ಸೂಚಿಗಳಿಗೆ ಸಬಂಧಿಸಿದಂತೆ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಹಿತದೃಷ್ಟಿಯಿಂದ ಅಂತಿಮಗೊಳಿಸಲಾಗಿದೆ.

**ದಿನಾಂಕ: 18-01-2022ರ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯ ಅನುಸಮರ್ಥನೆಯ ವಿಷಯಗಳು**

ವಿಷಯ ಸಂಖ್ಯೆ: 18 ಮೆಕ್ಯಾನಿಕಲ್ ಬ್ಲಾಕ್ ಕಟ್ಟಡ ಮತ್ತು ವಿಷಯ ಸಂಖ್ಯೆ: 19 ರಾಮನಗರ ಸ್ನಾತಕೋತ್ತರ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ ಕುರಿತು ದಿನಾಂಕ: 19-01-2022ರಂದು ನಡೆದ 162ನೇ ಮುಂದೂಡಿದ ಸಿಂಡಿಕೇಟ್ ಸಭೆಯಲ್ಲಿ ಈಗಾಗಲೇ ಅನುಮೋದನೆಯಾಗಿರುವುದರಿಂದ ಸದರಿ ವಿಷಯಗಳನ್ನು ಹೊರತುಪಡಿಸಿ, ವಿಷಯ ಸಂಖ್ಯೆ: 1 ರಿಂದ 17ರ ವರೆಗಿನ ವಿಷಯಗಳ ಬಗ್ಗೆ ದಿನಾಂಕ: 18-01-2022ರ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳಲ್ಲಿನ ನಿರ್ಣಯಗಳನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**163ನೇ ಸಿಂಡಿಕೇಟ್ ಸಭೆಯಲ್ಲಿ ಮಂಡಿತವಾಗಿದ್ದ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಅಂತಿಮಗೊಳಿಸಲಾದ ನಿರ್ಣಯಗಳು**

**ವಿಷಯ ಸಂಖ್ಯೆ 1:** ದಿನಾಂಕ 09.11.2021 ರಂದು ಜರುಗಿದ 161 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 17.11.2021 ರಂದು ಜರುಗಿದ ಮುಂದೂಡಿದ 161ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ದಿನಾಂಕ 09.11.2021 ರಂದು ಜರುಗಿದ 161 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 17.11.2021 ರಂದು ಜರುಗಿದ ಮುಂದೂಡಿದ 161ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ್ ಸ್ಥಿರೀಕರಿಸಿತು.

**ವಿಷಯ ಸಂಖ್ಯೆ 2:** ದಿನಾಂಕ 09.11.2021 ರಂದು ಜರುಗಿದ 161 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 17.11.2021 ರಂದು ಜರುಗಿದ ಮುಂದೂಡಿದ 161 ನೇ ಸಿಂಡಿಕೇಟ್ ಸಭೆಗಳ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

**ನಿರ್ಣಯ:**

ದಿನಾಂಕ 09.11.2021 ರಂದು ಜರುಗಿದ 161 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 17.11.2021 ರಂದು ಜರುಗಿದ ಮುಂದೂಡಿದ 161 ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳನ್ನು (ATR) ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

Item No. **3:** Proceedings of the meeting of the advisory committee of placement cell held on 28.06.2021.

***Resoluton:***

The Syndicate approved the proceedings of the meeting of the Advisory Committee of Placement Cell held on 28.06.2021.

**ವಿಷಯ ಸಂಖ್ಯೆ 4** ಪ್ರೊ. ರಾಮಚಂದ್ರಗೌಡ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇವರ ವರ್ಗಾವಣೆಗೆ ಅನುಮತಿಸಿರುವ ಆದೇಶವನ್ನು ಅನುಸಮರ್ಥಿಸುವ ಕುರಿತು.

**ನಿರ್ಣಯ:**

ಪ್ರೊ. ರಾಮಚಂದ್ರಗೌಡ ಎಂ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇವರು ಅವರ ಹುದ್ದೆಯ ಧಾರಣಾ ಅಧಿಕಾರವನ್ನು ಉಳಿಸಿಕೊಳ್ಳುವ ಅಥವಾ ಅವರು ವರ್ಗಾವಣೆಗೊಂಡು ವಿಶ್ವವಿದ್ಯಾಲಯದಲ್ಲಿ ವಿಲೀನಗೊಳ್ಳುವ ಆಯ್ಕೆಯ ಸ್ವಾತಂತ್ರ್ಯದೊಂದಿಗೆ ದಿನಾಂಕ: 14-02-2019ರ ಬೆಂಗಳೂರು ವಿಶ್ವವಿದ್ಯಾಲಯದ ಆದೇಶದಲ್ಲಿ ಅವರ ಸೇವೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಪಡೆದಿದ್ದರು. ಆದರೆ, ಪ್ರಸ್ತುತ ಮಾತೃ ವಿಶ್ವವಿದ್ಯಾಲಯಕ್ಕೆ ವಾಪಸ್ಸಾಗಲು ಅವರು ಮನವಿ ಸಲ್ಲಿಸಿದ್ದ ಕಾರಣ, ಪ್ರೊ. ರಾಮಚಂದ್ರಗೌಡ ಎಂ, ಅವರನ್ನು ಬೆಂಗಳೂರು ವಿಶ್ವವಿದ್ಯಾಲಯದ ರಾಮನಗರ ಸ್ನಾತಕೋತ್ತರ ಕೇಂದ್ರದ ವಾಣಿಜ್ಯ ವಿಭಾಗಕ್ಕೆ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಎದುರಾಗಿ ವರ್ಗಾವಣೆಗೆ ಮಾಡಿ ಹೊರಡಿಸಲಾದ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಸಿಬ್ಬಂದಿ-2:ಇ5: APT/L/ 2020-21 ದಿನಾಂಕ: 28.06.2021ನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 5** ಡಾ. ಜಯರಾಮ ನಾಯ್ಕ, ಪ್ರಧಾನ ಕ್ಷೇಮಪಾಲಕರು, ಪುರುಷ ವಿದ್ಯಾರ್ಥಿ ನಿಲಯ-1 ಮತ್ತು 2, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರು ಎ.ಸಿ/ಜಿ.ಐ.ಎ ಬಿಲ್ಲಿನಲ್ಲಿ ಮುಂಗಡವಾಗಿ ಹಣ ಪಡೆದು ಇದುವರೆವಿಗೂ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದ ಕಾರಣ ಅವರ ವೇತನದಲ್ಲಿ ಹಣವನ್ನು ಮುರುಗಡೆ ಮಾಡುವ ಬಗ್ಗೆ.

**ನಿರ್ಣಯ:**

ಡಾ. ಜಯರಾಮ ನಾಯ್ಕ, ಪ್ರಧಾನ ಕ್ಷೇಮಪಾಲಕರು, ಪುರುಷ ವಿದ್ಯಾರ್ಥಿ ನಿಲಯ-1 ಮತ್ತು 2, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರು ಎ.ಸಿ/ಜಿ.ಐ.ಎ ಬಿಲ್ಲಿನಲ್ಲಿ ಮುಂಗಡವಾಗಿ ಹಣ ಪಡೆದು

ಇದುವರೆವಿಗೂ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದ ಕಾರಣ ರೂ. 2,25,000/- ಗಳನ್ನು ಅವರ ವೇತನದಲ್ಲಿ ಮುರುಗಡೆ ಮಾಡಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ** 6 ಶ್ರೀ ಮಲ್ಲಾರಾಧ್ಯ ಎಸ್, ಅಧೀಕ್ಷಕರು ಪರೀಕ್ಷಾ ವಿಭಾಗ, ಇವರ ಪತ್ನಿಯ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವ ಬಗ್ಗೆ.

**ನಿರ್ಣಯ:**

ಶ್ರೀ ಮಲ್ಲಾರಾಧ್ಯ ಎಸ್, ಅಧೀಕ್ಷಕರು ಪರೀಕ್ಷಾ ವಿಭಾಗ, ಇವರ ಪತ್ನಿಯ ವೈದ್ಯಕೀಯ ವೆಚ್ಚದ ಉಳಿಕೆ ಮೊತ್ತವನ್ನು ಮರುಪಾವತಿ ಮಾಡುವ ಸಂಬಂಧ ನಿಯಮಾವಳಿಗಳಲ್ಲಿ ಅವಕಾಶವಿಲ್ಲದ ಕಾರಣ ಮನವಿಯನ್ನು ಪರಿಗಣಿಸದಿರಲು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 7** 2021-22ನೇ ಸಾಲಿಗೆ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಗೆ ಹೊಸದಾಗಿ ಸ್ವಾಯತ್ತತೆಯನ್ನು ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯನ್ನು ರಚಿಸುವ ಬಗ್ಗೆ.

**ನಿರ್ಣಯ:**

2021-22ನೇ ಸಾಲಿಗೆ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಗೆ ಹೊಸದಾಗಿ ಸ್ವಾಯತ್ತತೆಯನ್ನು ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಕುಲಪತಿಗಳಿಗೆ ಅಧೀಕರಿಸಿತು.

**ವಿಷಯ ಸಂಖ್ಯೆ 8** ದಿನಾಂಕ 23.03.2021 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯ ಬಗ್ಗೆ.

**ನಿರ್ಣಯ:**

ದಿನಾಂಕ 23.03.2021 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 9** ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ದಿನಾಂಕ 12.10.2021 ರಂದು ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು/ಕಛೇರಿಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸುವ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ದಿನಾಂಕ 12.10.2021 ರಂದು ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು/ಕಛೇರಿಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸಿರುವ ಆದೇಶ ಸಂಖ್ಯೆ: ಇಎಸ್‌ಟಿ1/ಇ1/ಹೊಗು/2016-17 ದಿನಾಂಕ: 12.10.2021ನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 10** ಬಯೋ ಪಾರ್ಕ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ತೋಟಪಾಲಕ ಕಾರ್ಯದ ಜೊತೆಗೆ ಟ್ರ್ಯಾಕ್ಟರ್ ಚಾಲನೆ ಕಾರ್ಯನಿರ್ವಹಿಸುತ್ತಿರುವ ಒಬ್ಬ ನೌಕರನಿಗೆ ಚಾಲಕ ವೇತನವನ್ನು ನಿಗದಿಪಡಿಸಿ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಹೊರಡಿಸಿರುವ ಆದೇಶ ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ಬಯೋ ಪಾರ್ಕ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ತೋಟಪಾಲಕ ಕಾರ್ಯದ ಜೊತೆಗೆ ಟ್ರ್ಯಾಕ್ಟರ್ ಚಾಲನೆ ಕಾರ್ಯನಿರ್ವಹಿಸುತ್ತಿರುವ ಒಬ್ಬ ನೌಕರನಿಗೆ, ಹೊರಗುತ್ತಿಗೆ ಆಧಾರದ ಮೇಲೆ ಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ನೀಡುತ್ತಿರುವ ಸಂಭಾವನೆಯನ್ನು ರೂ.15,759/-ಕ್ಕೆ ನಿಗದಿಪಡಿಸಿ ಹೊರಡಿಸಲಾದ ಆದೇಶ ಸಂಖ್ಯೆ: ಇಎಸ್‌ಟಿ1/ಇ1/ಬಯೋಪಾರ್ಕ್/ಹೊಗು/2020-21 ದಿನಾಂಕ; 01.10.2021ನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**Item No. 11** Introduction of new UG Honours Courses in Bangalore University under New National Education Policy-2020

***Resolution:***

The Syndicate ratified the action taken by the Banglaore University for introduction of new 4 years integrated BA/B.Sc. (Honours) courses under New National Education Policy-2020 in Bangalore University.

**ವಿಷಯ ಸಂಖ್ಯೆ 12:** 2020-21ನೇ ಸಾಲಿನಲ್ಲಿ ಹೊಸ ಕಾಲೇಜು ಸಂಯೋಜನೆ ಕೋರಿ ಅರ್ಜಿ ಸಲ್ಲಿಸಿ, ತದನಂತರ ಸರ್ಕಾರದ ನಿರ್ದೇಶನದಂತೆ, NBC (National Building Code) ನಿಯಮಾವಳಿಗಳನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆ ಮತ್ತು Fire Services Department ನಿಂದ Compliance certificate ಗಳನ್ನು ಸಲ್ಲಿಸದಿರುವ ಕಾಲೇಜುಗಳಿಗೆ ಸಂಯೋಜನೆ ಪ್ರಕ್ರಿಯೆ ಅಥವಾ ಸಂಯೋಜನಾ ಶುಲ್ಕ ಮರು-ಪಾವತಿಯ ಬಗ್ಗೆ.

**ನಿರ್ಣಯ:**

ದಿನಾಂಕ:16.09.2019ರ ವಿಶ್ವವಿದ್ಯಾಲಯದ ಅಧಿಸೂಚನೆಯಲ್ಲಿ, 2020-21ನೇ ಸಾಲಿನಲ್ಲಿ ಹೊಸ ಕಾಲೇಜು ಸಂಯೋಜನೆ ಕೋರಿ ಅರ್ಜಿಯನ್ನು ಆಹ್ವಾನಿಸಿದ್ದು, ಆ ಸಂದರ್ಭದಲ್ಲಿ ಸರ್ಕಾರ ಅಥವಾ ವಿಶ್ವವಿದ್ಯಾಲಯದ ನಿಯಮಾವಳಿಗಳಲ್ಲಿ NBC (National Building Code) ನಿಯಮಾವಳಿಗಳನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆ ಮತ್ತು Fire Services Department ನಿಂದ Compliance certificate ಗಳನ್ನು ಸಲ್ಲಿಸುವ ಬಗ್ಗೆ ಮಾನದಂಡಗಳನ್ನು ನಿಗದಿಪಡಿಸಿರಲಿಲ್ಲ. ಸದರಿ ಅಧಿಸೂಚನೆಯನುಸಾರ ಹೊಸ ಸಂಯೋಜನೆ ಕೋರಿ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ 21 ಕಾಲೇಜುಗಳು ಅರ್ಜಿ ಸಲ್ಲಿಸಿದ್ದವು. ಈ ಮಧ್ಯೆ ಕೋವಿಡ್-19ರ ಕಾರಣ ಸದರಿ ವರ್ಷದ ಸಂಯೋಜನಾ

ಪ್ರಕ್ರಿಯೆ ವಿಳಂಬಗೊಂಡಿತ್ತು. ಆದರೆ, ತದನಂತರ, ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ: ಇಡಿ 218 ಯುಎನ್ಇ 2020 ದಿನಾಂಕ: 24-08-2020 ರಲ್ಲಿ ಮೇಲ್ಕಂಡ ಮಾನದಂಡಗಳನ್ನು ನಿಗದಿಪಡಿಸಿ, ಸದರಿ ಮಾನದಂಡಗಳನ್ನು ಪೂರೈಕೆ ಮಾಡಿದ ಕಾಲೇಜುಗಳಿಗೆ ಮಾತ್ರ ಹೊಸ ಸಂಯೋಜನೆ ನೀಡುವ ಬಗ್ಗೆ ವಿಶ್ವವಿದ್ಯಾಲಯಗಳು ಶಿಫಾರಸ್ಸು ಮಾಡಬೇಕೆಂದು ನಿರ್ದೇಶನ ನೀಡಿತ್ತು. ಸದರಿ ಮಾನದಂಡ ಪೂರೈಸದ ಈ 21 ಕಾಲೇಜುಗಳ ಅರ್ಜಿಗಳನ್ನು ಸ್ಥಳೀಯ ವಿಚಾರಣಾ ಸಮಿತಿಯ ಪರಿವೀಕ್ಷಣೆಗೆ ವಹಿಸಿರುವುದಿಲ್ಲ. ಈ ಕಾಲೇಜುಗಳು ಅರ್ಜಿ ಸಲ್ಲಿಸಿದ್ದ ಸಂದರ್ಭದಲ್ಲಿ ಸದರಿ ಮಾನದಂಡಗಳನ್ನು ನಿಗದಿಪಡಿಸಿರುವುದಿಲ್ಲವಾದ್ದರಿಂದ ಅವರ ಅರ್ಜಿಗಳನ್ನು ಹಿಂದಿರುಗಿಸಿ, ಅವರು ಪಾವತಿಸಿದ್ದ ಸಂಯೋಜನಾ ಶುಲ್ಕಗಳನ್ನು ಹಿಂದಿರುಗಿಸಲು ಸಿಂಡಿಕೇಟ್ ಅನುಮೋದಿಸಿತು.

**Item No 13** Approval for introduction of B.Sc., (Hons.) Agricultural Skill and Entrepreneurship programme at GPS Instituted of Agriculture Management under Section 66 (1) of KSU Act, 2000.

***Resolution:***

The Syndicate considered and approved the report submitted by the Expert Committee under the Chairmanship of the Vice-Chancellor for introduction of B.Sc., (Hons.) Agricultural Skill and Entrepreneurship programme at GPS Instituted of Agriculture Management under Section 66 (1) of KSU Act, 2000.

**ವಿಷಯ ಸಂಖ್ಯೆ 14:** ಕಿರಿಯ ನೌಕರರಿಗೆ ನೀಡಿರುವ ಸೇವಾ ಹಿರಿತನದ ಸೌಲಭ್ಯಗಳನ್ನು ನಿವೃತ್ತಿ ಅಂಚಿನಲ್ಲಿರುವ ಹಿರಿಯ ಎಂ.ಆರ್.ಇ ನೌಕರರಿಗೂ ನೀಡುವಂತೆ ದಿನಾಂಕ 10.08.2020 ರಂದು ನೀಡಿರುವ ಜಂಟಿ ಮನವಿ.

**ನಿರ್ಣಯ:**

ಕಿರಿಯ ನೌಕರರಿಗೆ ನೀಡಿರುವ ಸೇವಾ ಹಿರಿತನದ ಸೌಲಭ್ಯಗಳನ್ನು ನಿವೃತ್ತಿ ಅಂಚಿನಲ್ಲಿರುವ ಹಿರಿಯ ಎಂ.ಆರ್.ಇ ನೌಕರರಿಗೂ ನೀಡುವಂತೆ ದಿನಾಂಕ 10.08.2020 ರಂದು ನೀಡಿರುವ ಜಂಟಿ ಮನವಿಯ ಬಗ್ಗೆ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 15** ಶ್ರೀ ಎನ್. ಆಂಜಲಪ್ಪ, ದಿನಗೂಲಿ/ಮಾಸಿಕ ಕ್ರೋಢೀಕೃತ ನೌಕರರಾದ ಇವರು ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಸೇರಿದ ದಿನಾಂಕವನ್ನು ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಹಾಗೂ ಇವರು ನೀಡಿರುವ ದಾಖಲೆಗಳನ್ನು ಪರಿಶೀಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಬಗ್ಗೆ.

**ನಿರ್ಣಯ:**

ಶ್ರೀ ಎನ್. ಆಂಜಲಪ್ಪ, ದಿನಗೂಲಿ/ಮಾಸಿಕ ಕ್ರೋಢೀಕೃತ ನೌಕರರಾದ ಇವರು ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಸೇರಿದ ದಿನಾಂಕವನ್ನು ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ದಾಖಲೆಗಳನ್ನು

ಪರಿಶೀಲಿಸಿದಾಗ ಅವರು ಕೆಲಸಕ್ಕೆ ಸೇರಿದ ದಿನಾಂಕವು 15-11-1996 ಆಗಿದ್ದು, ಅವರು 01-04-1996 ನಂತರ ದಿನಗೂಲಿ ನೌಕರರಾಗಿ ಸೇವೆಗೆ ಸೇರಿರುವ ಕಾರಣ ಅವರನ್ನು ಖಾಯಮಾತಿ ಮಾಡಲು ಸಾಧ್ಯವಿರುವುದಿಲ್ಲವೆಂದು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 16** ಶ್ರೀ ಐ.ಎನ್. ಪಾಟೀಲ್, ಉಪನ್ಯಾಸಕರು (ನಿವೃತ್ತ) ಭೂಗೋಳ ಶಾಸ್ತ್ರ ವಿಭಾಗ, ಬೆಂ.ವಿ.ವಿ ಇವರಿಗೆ ತಡೆಹಿಡಿದಿರುವ ವಾರ್ಷಿಕ ಬಡ್ತಿಯನ್ನು ಮತ್ತು ಪರಿಷ್ಕೃತ ವೇತನವನ್ನು ನಿಗದಿಗೊಳಿಸುವ ಬಗ್ಗೆ.

**ನಿರ್ಣಯ:**

ಶ್ರೀ ಐ.ಎನ್. ಪಾಟೀಲ್, ಉಪನ್ಯಾಸಕರು (ನಿವೃತ್ತ) ಭೂಗೋಳ ಶಾಸ್ತ್ರ ವಿಭಾಗ, ಬೆಂ.ವಿ.ವಿ ಇವರಿಗೆ ತಡೆಹಿಡಿದಿರುವ ವಾರ್ಷಿಕ ಬಡ್ತಿಯನ್ನು ಮತ್ತು ಪರಿಷ್ಕೃತ ವೇತನವನ್ನು ನಿಗದಿಗೊಳಿಸುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಇದೇ ತೆರನಾದ ಪ್ರಕರಣಗಳಲ್ಲಿ ತೆಗೆದುಕೊಳ್ಳಲಾದ ತೀರ್ಮಾನಕ್ಕೆ ಲೆಕ್ಕಪರಿಶೋಧಕರ ಆಕ್ಷೇಪಣೆ ಇಲ್ಲದೇ ಇದ್ದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 17** ಸಾಯಿ ಆಫೀಸ್ ಸಪ್ಲೈಯರ್ಸ್‌ರವರನ್ನು ಕಪ್ಪು ಪಟ್ಟಿಗೆ ಸೇರಿಸುವ ಬಗ್ಗೆ.

**ನಿರ್ಣಯ:**

ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವಂತೆ, ಮೆ. ಸಾಯಿ ಆಫೀಸ್ ಸಪ್ಲೈಯರ್ಸ್‌ರವರನ್ನು ಕಪ್ಪು ಪಟ್ಟಿಗೆ ಸೇರಿಸಲು ಹಾಗೂ ಇವರು ಟೆಂಡರ್ ಸಮಯದಲ್ಲಿ ಸಲ್ಲಿಸಿದ ಇ.ಎಂ.ಡಿ. ಮೊತ್ತ ರೂ.1,00,000/-ಗಳನ್ನು ಮತ್ತು ರೂ.2,47,547/-ಗಳ ಬಿಲ್ಲಿನ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 18** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಪ್ರಸ್ತಾಪಿಸಿರುವ ಕಾಲೇಜುಗಳ ಸಂಯೋಜನೆಯ ಕುರಿತಂತೆ ಸಮಾನ ಕರಡು ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯ ವತಿಯಿಂದ ರೂಪಿಸುವ ಬಗ್ಗೆ.

**ನಿರ್ಣಯ:**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಪ್ರಸ್ತಾಪಿಸಿರುವ ಕಾಲೇಜುಗಳ ಸಂಯೋಜನೆಯ ಕುರಿತಂತೆ ಸಮಾನ ಕರಡು ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯ ವತಿಯಿಂದ ರೂಪಿಸುವ ಬಗ್ಗೆ, ಸ್ಟಾಚ್ಯೂಟ್ ಸಮಿತಿಯ ಸಲ್ಲಿಸಿರುವ ಕರಡು ಪರಿನಿಯಮಾವಳಿ **Statutes Governing the Affiliation of Colleges/ Institutions under the jurisdiction of Bangalore University, 2019 (Framed under Section 59 read with Sections 40(g) and 41 of the Karnataka State Universities Act 2000)** ಅನ್ನು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 41 (5)ರ ಅಡಿಯಲ್ಲಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 19:** ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧ ಪಟ್ಟಂತೆ ಕರಡು ಪರಿನಿಯಮಾವಳಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧ ಪಟ್ಟಂತೆ ರಚಿಸಲಾದ ಕರಡು ಪರಿನಿಯಮಾವಳಿ Statutes Relating to Establishment of Dr. Babu Jagajivan Ram Studies and Research Centre in Bangalore University, 2020 ಅನ್ನು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 41 (5)ರ ಅಡಿಯಲ್ಲಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 20:** Shri B. Basavalingappa Institute for Development Studies, (B-BIDS) ಸ್ಥಾಪನೆಯ ಸಂಬಂಧ ಕರಡು ಪರಿನಿಯಮಾವಳಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

Shri B. Basavalingappa Institute for Development Studies, (B-BIDS) ಸ್ಥಾಪನೆಯ ಸಂಬಂಧ ಕರಡು ಪರಿನಿಯಮಾವಳಿ Statutes relating to the establishment of "Sri. B. Basavalingappa Institute for Development Studies (B-BIDS)" ಅನ್ನು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 41 (5)ರ ಅಡಿಯಲ್ಲಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 21** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಿಕ್ಷಕರ ಸಂಘಕ್ಕೆ ಮಾನ್ಯತೆ ನೀಡುವ ಬಗ್ಗೆ.

**ನಿರ್ಣಯ:**

ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 4 (xvii)ರ ಅನ್ವಯ ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಿಕ್ಷಕರ ಸಂಘಕ್ಕೆ ಮಾನ್ಯತೆಯನ್ನು ನೀಡಲು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 22:** ಶ್ರೀ ದಿವಾಕರ್.ಡಿ, ಸಂಶೋಧನಾ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಶ್ರೀ ದಿವಾಕರ್.ಡಿ, ಸಂಶೋಧನಾ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ, ಅರ್ಜಿ ಸಲ್ಲಿಸುವ ವಿಳಂಬವನ್ನು ಮನ್ನಿಸಿ ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 23:** 2021–22ನೇ ಸಾಲಿನ ಆಯವ್ಯಯ ಅಂದಾಜಿಗೆ ಕೆಲವು ಚಟುವಟಿಕೆ ಯೋಜನೆಗಳ/ಕಾರ್ಯಕ್ರಮಗಳಿಗೆ ಅನುದಾನ ಒದಗಿಸುವ ಬಗ್ಗೆ.

**ನಿರ್ಣಯ:**

ಪರಾಮರ್ಶಿತ ಟಿಪ್ಪಣಿಯಲ್ಲಿ ಸಲ್ಲಿಸಲಾದ ಪ್ರಸ್ತಾವನೆಯಂತೆ, 2021–22ನೇ ಸಾಲಿನ ಆಯವ್ಯಯ ಅಂದಾಜಿಗೆ ಕೆಲವು ಚಟುವಟಿಕೆ ಯೋಜನೆಗಳ/ಕಾರ್ಯಕ್ರಮಗಳಿಗೆ ಅನುದಾನ ಒದಗಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 24** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಬೆಂಗಳೂರು ವಿದ್ಯುತ್ ಕಂಪನಿ ವತಿಯಿಂದ 66/11 ಕೆ.ವಿ ವಿದ್ಯುತ್ ಉಪ–ಕೇಂದ್ರ ಸ್ಥಾಪನೆ ಮಾಡಲು ಜ್ಞಾನಭಾರತಿ ವಿಶ್ವವಿದ್ಯಾಲಯದ ಆವರಣದಲ್ಲಿ 50 X 50 ಮೀಟರ್ ಜಾಗವನ್ನು ನೀಡುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**Item No. 25:** Providing 12-00 Acres of land to BWSSB to establish 60 MLD Waste Water Treatment Plant at Bangalore University Campus to provide water from waste water treatment to all the trees herbs, sherbs and grass of Bangalore University as there is scarcity of water to the plants.

***Resolution:***

Deferred.

**Item No. 26:** Proceedings of the 60th Works Committee meeting held on 05th July 2021, at 3.00 P.M in the Board Room, U.V.C.E, K.R Circle, Bangalore University, Bengaluru

***Resolution:***

The Syndicate resolved to approve the proceedings of the 60th Works Committee meeting held on 05th July 2021, at 3.00 P.M in the Board Room, U.V.C.E, K.R Circle, Bangalore University, Bengaluru.

**ವಿಷಯ ಸಂಖ್ಯೆ 27:** ಶ್ರೀ ಬೈರಪ್ಪ, ಫ್ಲೋರ್‌ಮೆನ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ ಇವರಿಗೆ ಎಐಸಿಟಿಇ ವೇತನ ಶ್ರೇಣಿ ಅಳವಡಿಸಿದ ನಂತರ ಮೂಲ ಪಿಂಚಣಿಯನ್ನು ಮರು ನಿಗದಿಪಡಿಸಿ ವ್ಯತ್ಯಾಸದ ಮೊತ್ತ ಪಾವತಿಸುವ ಬಗ್ಗೆ.

**ನಿರ್ಣಯ:**

ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವಂತೆ, ಶ್ರೀ ಬೈರಪ್ಪ, ಫ್ಲೋರ್‌ಮೆನ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ ಇವರಿಗೆ ಎಐಸಿಟಿಇ ವೇತನ ಶ್ರೇಣಿ ಅಳವಡಿಸಿದ ನಂತರ ಮೂಲ

ಪಿಂಚಣಿಯನ್ನು ಮರು ಲೆಕ್ಕಚಾರ ಮಾಡಿದ ನಂತರ, ದಿನಾಂಕ;01.02.2017ರಿಂದ ಮೂಲ ಪಿಂಚಣಿಯನ್ನು ಪರಿಷ್ಕರಿಸಿ, ಈಗಾಗಲೇ ವಿಶ್ವವಿದ್ಯಾಲಯದ ಆದೇಶದಂತೆ ತಪ್ಪಾಗಿ ನಿಗದಿಪಡಿಸಿ ಪಾವತಿಸಲಾಗಿದ್ದ ಮೂಲ ಪಿಂಚಣಿ ಮತ್ತು ತುಟ್ಟಿ ಭತ್ಯೆ ವ್ಯತ್ಯಾಸದ ಮೊತ್ತವನ್ನು ಕೆ.ಸಿ.ಎಸ್.ಆರ್. ನಿಯಮ 338ರ ಪ್ರಕಾರ ಮುರುಗಡೆ ಮಾಡಿಕೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 28:** ಶ್ರೀ ಮಲ್ಲಿಕಾರ್ಜುನಯ್ಯ.ಎಂ, ಕಿರಿಯ ಸಹಾಯಕರು, ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಬಗ್ಗೆ ಮಾನ್ಯ ಉಪ ಲೋಕಾಯುಕ್ತ ರವರ ಶಿಫಾರಸ್ಸಿನ ಮೇರೆಗೆ ದಂಡನೆ ವಿಧಿಸುವ ಬಗ್ಗೆ.

**ನಿರ್ಣಯ:**

ಶ್ರೀ ಮಲ್ಲಿಕಾರ್ಜುನಯ್ಯ ಎಂ, ಕಿರಿಯ ಸಹಾಯಕರು, ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಬಗ್ಗೆ ಮಾನ್ಯ ಉಪ ಲೋಕಾಯುಕ್ತ ರವರ ಶಿಫಾರಸ್ಸಿನ ಮೇರೆಗೆ ದಂಡನೆ ವಿಧಿಸುವ ವಿಷಯದ ಬಗ್ಗೆ ಕಾನೂನು ಸಲಹೆಗಾರ ಅಭಿಪ್ರಾಯದ ಪ್ರತಿಯನ್ನು ನಿರ್ಣಯಕ್ಕಾಗಿ ಮುಂದಿನ ಸಿಂಡಿಕೇಟ್ ಮುಂದೆ ಮಂಡಿಸಲು ಸಿಂಡಿಕೇಟ್ ನಿರ್ಣಯಿಸಿತು.

**Item No. 29:** Enhancement of number of scholarships under Social Science Talent Search Scheme and enhancement sanction of additional grants-reg.

**Resolution:**

The Syndicate resolved to enhance the number of students for scholarships under Social Science Talent Search Scheme from 25 to 50 students and also to enhance the additional grants from Rs.75,000/- to Rs.2,00,000/- as per the request made by the Director, Institute for Social and Economic Change, Bengaluru, subject to availability of grants.

**ವಿಷಯ ಸಂಖ್ಯೆ 30:** ಆರೋಗ್ಯ ಅಧಿಕಾರಿಗಳು (ಹೊರಗುತ್ತಿಗೆ), ಆರೋಗ್ಯ ಕೇಂದ್ರ, ಬೆಂ.ವಿ.ವಿ ಇವರಿಗೆ ಎಸಿ ಬಿಲ್ಲಿನಲ್ಲಿ ಹಣ ನೀಡಿರುವುದಕ್ಕೆ ಘಟನೋತ್ತರ ಮಂಜೂರಾತಿ ಕುರಿತು.

**ನಿರ್ಣಯ:**

ಆರೋಗ್ಯ ಅಧಿಕಾರಿಗಳು (ಹೊರಗುತ್ತಿಗೆ), ಆರೋಗ್ಯ ಕೇಂದ್ರ, ಬೆಂ.ವಿ.ವಿ ಇವರಿಗೆ ಎಸಿ ಬಿಲ್ಲಿನಲ್ಲಿ ಹಣ ಮಂಜೂರು ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**Item No.31:** Sanction of Annual Increments from 2003 to Sri. B.K. Venugopal, Associate Professor, Dept. of Electronics and Communication Engineering, UVCE-reg

***Resolution:***

The Syndicate resolved to waive of the enquiry against Sri. B.K. Venugopal, Associate Professor, Dept. of Electronics and Communication Engineering, UVCE and also to consider the suspension period as 'ON DUTY' period and to release the salary of the suspended period from 24.08.2004 to 27.07.2005 and also to fix the annual increments due from 2003 onwards along with 6th and 7th pay scale as per U.O. dated 09.4.2020 as detailed in the reference note.

**ವಿಷಯ ಸಂಖ್ಯೆ 32:** ಡಿ॥ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ವಿದ್ಯಾಕಾರ್ಯ ಶಾಖೆ–3, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ವೈಧ್ಯಕೀಯ ವೆಚ್ಚವನ್ನು ಮರು ಪಾವತಿಸುವ ಬಗ್ಗೆ.

**ನಿರ್ಣಯ:**

ಡಿ॥ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ವಿದ್ಯಾಕಾರ್ಯ ಶಾಖೆ–3, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ವೈಧ್ಯಕೀಯ ವೆಚ್ಚದ ಅರ್ಹ ಬಾಕಿ ವ್ಯತ್ಯಾಸದ ಮೊತ್ತದ ಮರುಪಾವತಿಗೆ ನಿಯಮಾವಳಿಗಳಲ್ಲಿ ಅವಕಾಶವಿಲ್ಲದ ಕಾರಣ ಮನವಿಯನ್ನು ಪರಿಗಣಿಸದಿರಲು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 33:** ಶ್ರೀ ಗಂಗಾಧರ, ಅನುಚರ, ದೈಹಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಮಗನಿಗೆ ಡಯಾಲಿಸಿಸ್‌ಗೆ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಬಗ್ಗೆ.

**ನಿರ್ಣಯ:**

ಶ್ರೀ ಗಂಗಾಧರ, ಅನುಚರ, ದೈಹಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಮಗನಿಗೆ ಡಯಾಲಿಸಿಸ್‌ಗೆ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 34:** ಶ್ರೀ ಧನರಾಜ್.ಹೆಚ್, ಗ್ರೂಪ್ 'ಡಿ' ನೌಕರರು, ಭೌತಶಾಸ್ತ್ರ ವಿಭಾಗ, ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ನಡೆಸಿದ ವಿಚಾರಣಾ ವರದಿಯನ್ನಾಧರಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ.

**ನಿರ್ಣಯ:**

ಶ್ರೀ ಧನರಾಜ್.ಹೆಚ್, ಗ್ರೂಪ್ 'ಡಿ' ನೌಕರರು, ಭೌತಶಾಸ್ತ್ರ ವಿಭಾಗ, ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ನಡೆಸಿದ ವಿಚಾರಣಾ ವರದಿಯನ್ನು ಅನುಮೋದಿಸಿ ಕಾನೂನು ಅಭಿಪ್ರಾಯವನ್ನು ಪಡೆದು ಕ್ರಮ ಜರುಗಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 35:** ಶ್ರೀ ಶಶಿಕುಮಾರ್.ಕೆ, ದಿವಂಗತ ಶ್ರೀ ಕೇಶವಲು.ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ಹೆಚ್ಚಿನ ವಿವರಗಳೊಂದಿಗೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:**

ದಿನಾಂಕ: 18-01-2022ರ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಈಗಾಗಲೇ ನಿರ್ಣಯ ತೆಗೆದುಕೊಳ್ಳಲಾಗಿದೆ.

**ವಿಷಯ ಸಂಖ್ಯೆ 36:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 24.02.2020 ರಂದು ನಡೆದ ಸಭೆಯ ನಡವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಕಲಾ ನಿಕಾಯದ ಬಿ.ಎ. ಪದವಿ ಪರೀಕ್ಷೆಗೆ ಸಂಬಂಧಿಸಿದಂತೆ, ದಿನಾಂಕ: 24.02.2020 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ. 37:** ಶ್ರೀ ಕೇಶವರೆಡ್ಡಿ, ಗ್ರೂಪ್ 'ಡಿ' ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ಕ್ರಮವಹಿಸುವ ಹಾಗೂ ದಂಡನೆಯನ್ನು ವಿಧಿಸುವ ಬಗ್ಗೆ ಹಾಗೂ ಹುಟ್ಟಿದ ದಿನಾಂಕ ಮತ್ತು ಇತ್ಯಾದಿ ವಿವರಗಳೊಂದಿಗೆ ವಿಷಯವನ್ನು ಮಂಡಿಸುವ ಬಗ್ಗೆ.

ಶ್ರೀ ಕೇಶವರೆಡ್ಡಿ, ಗ್ರೂಪ್ 'ಡಿ' ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ನಡೆಸಿದ ವಿಚಾರಣಾ ವರದಿಯನ್ನು ಅನುಮೋದಿಸಿ ಕಾನೂನು ಅಭಿಪ್ರಾಯವನ್ನು ಪಡೆದು ಕ್ರಮ ಜರುಗಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 38:** ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಗ್ರಂಥಪಾಲಕರ ಕ್ರೋಢೀಕೃತ ವೇತನವನ್ನು ಹೆಚ್ಚಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ 39:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ದಿನಗೂಲಿ/ಮಾಸಿಕ ಕ್ರೋಢೀಕೃತ ನೌಕರರಿಗೆ ನೀಡುತ್ತಿರುವ ಶೇ. 75% ತುಟ್ಟಿ ಭತ್ಯೆ ಶೇ 100% ಕ್ಕೆ ಹೆಚ್ಚಿಸುವ ಬಗ್ಗೆ

**ನಿರ್ಣಯ:**

ದಿನಾಂಕ: 18-01-2022ರ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಈಗಾಗಲೇ ನಿರ್ಣಯ ತೆಗೆದುಕೊಳ್ಳಲಾಗಿದೆ.

**ವಿಷಯ ಸಂಖ್ಯೆ 40:** ತಾತ್ಕಾಲಿಕವಾಗಿ ನೇಮಕವಾಗಿರುವ ಶ್ರೀ. ಮುನಿವೆಂಕಟಪ್ಪ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ಸೇವೆಯನ್ನು ಮುಂದುವರಿಸುವ ಕುರಿತು.

**ನಿರ್ಣಯ:**

ಈ ಹಿಂದೆ ತೆಗೆದುಕೊಳ್ಳಲಾಗಿರುವ ಕ್ರಮದಂತೆ ತಾತ್ಕಾಲಿಕವಾಗಿ ನೇಮಕವಾಗಿರುವ ಶ್ರೀ. ಮುನಿವೆಂಕಟಪ್ಪ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ಸೇವೆಯನ್ನು ತಾತ್ಕಾಲಿಕವಾಗಿ ಅಸ್ತಿತ್ವದಲ್ಲಿರುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ಒಂದು ವರ್ಷದ ಅವಧಿಗೆ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 41:** ಶ್ರೀ ಎನ್. ಪುಟ್ಟಸ್ವಾಮಿ, ನಿವೃತ್ತ ವಿಶ್ವವಿದ್ಯಾಲಯ ಅಭಿಯಂತರರು, ಬೆಂಗಳೂರು ವಿಶ್ವವಿದ್ಯಾಲಯ ರವರಿಗೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ದಿನಾಂಕ 07.07.2021ರ ಆದೇಶದಂತೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಶ್ರೀ ಎನ್. ಪುಟ್ಟಸ್ವಾಮಿ, ನಿವೃತ್ತ ವಿಶ್ವವಿದ್ಯಾಲಯ ಅಭಿಯಂತರರು, ಬೆಂಗಳೂರು ವಿಶ್ವವಿದ್ಯಾಲಯ ಅವರಿಗೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ದಿನಾಂಕ 07.07.2021ರ ಆದೇಶದಂತೆ ವಿಚಾರಣೆಯನ್ನು ಕಾಯ್ದಿರಿಸಿ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 42:** ದಿನಾಂಕ 08.11.2021 ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಯ ಅನುಮೋದನೆ ಕುರಿತು.

**ನಿರ್ಣಯ:**

ದಿನಾಂಕ 08.11.2021 ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 43:** ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಘಟಕಕ್ಕೆ ಎನ್.ಎಸ್.ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿಯನ್ನು ನೇಮಿಸುವ ಕುರಿತು ಬಗ್ಗೆ.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಘಟಕಕ್ಕೆ ಎನ್.ಎಸ್.ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿಯನ್ನಾಗಿ ಡಾ. ರವೀಶ ಹೆಚ್.ಆರ್., ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರನ್ನು ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಹೆಚ್ಚುವರಿ ಕಾರ್ಯಭಾರವಾಗಿ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 44:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಿವಿಧ 23 ವಿಭಾಗಗಳಲ್ಲಿ ನಿರ್ದೇಶಕರು, ವಿಶೇಷಾಧಿಕಾರಿಗಳು ಮತ್ತು ಸಂಯೋಜಕರುಗಳಾಗಿ ಹೆಚ್ಚುವರಿ ಕಾರ್ಯಭಾರದೊಂದಿಗೆ ಕೆಲಸ ನಿರ್ವಹಿಸುವ ಬಗ್ಗೆ.

**ನಿರ್ಣಯ:**

ಈ ವಿಷಯದ ಬಗ್ಗೆ ಈಗಾಗಲೇ ಸಿಂಡಿಕೇಟ್ ರಚಿಸಿರುವ ವರದಿಯನ್ನು ನಿರೀಕ್ಷಿಸಲಾಗಿದೆ.

**Item No. 45:** Proceedings of Meeting of the Library Committee held on 30.08.2021

***Resolution:***

The Syndicate resolved to approve the proceedings of Meeting of the Library Committee held on 30.08.2021

**ವಿಷಯ ಸಂಖ್ಯೆ 46:** ಮಾನ್ಯ ಉಚ್ಚನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯವು ದಾಖಲಿಸಿರುವ ರಿಟ್ ಅಪೀಲ್ ಸಂಖ್ಯೆ 3779–3780/2019 ರಲ್ಲಿ ವಾದವನ್ನು ಮಂಡಿಸುತ್ತಿರುವ ಹಿರಿಯ ವಕೀಲರಾದ ಶ್ರೀ ಮಧುಸೂಧನ್.ಆರ್ ನಾಯ್ಕ್ ಮತ್ತು ವಿಶ್ವವಿದ್ಯಾಲಯದ ವಕೀಲರಾದ ಶ್ರೀ ಟಿ.ಪಿ. ರಾಜೇಂದ್ರ ಕುಮಾರ್ ಶುಂಗೆ ಇವರಿಗೆ ವೃತ್ತಿಪರ ಶುಲ್ಕ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಮಾನ್ಯ ಉಚ್ಚನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯವು ದಾಖಲಿಸಿರುವ ರಿಟ್ ಅಪೀಲ್ ಸಂಖ್ಯೆ 3779–3780/2019 ರಲ್ಲಿ ವಾದವನ್ನು ಮಂಡಿಸುತ್ತಿರುವ ಹಿರಿಯ ವಕೀಲರಾದ ಶ್ರೀ ಮಧುಸೂಧನ್.ಆರ್ ನಾಯ್ಕ್ ಮತ್ತು ವಿಶ್ವವಿದ್ಯಾಲಯದ ವಕೀಲರಾದ ಶ್ರೀ ಟಿ.ಪಿ. ರಾಜೇಂದ್ರ ಕುಮಾರ್ ಶುಂಗೆ ಅವರುಗಳಿಗೆ ಅನುಕ್ರಮವಾಗಿ ರೂ.6,00,000/– ಮತ್ತು ರೂ.34,450/–ಗಳನ್ನು ವೃತ್ತಿ ಶುಲ್ಕವಾಗಿ ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 47:** ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆಯದೇ 2014 ರಲ್ಲಿ TATAZEST-XT (DIESEL) ಕಾರ್ ಅನ್ನು ಖರೀದಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಡಾ. ಸಿ. ಸೋಮಶೇಖರ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ರವರ ವಿರುದ್ಧ ಶಿಸ್ತುಕ್ರಮ ಜಾರಿಗೊಳಿಸುವಂತೆ ಸರ್ಕಾರದ ನಿರ್ದೇಶನದಂತೆ ನಿರ್ಣಯ ಕೈಗೊಳ್ಳುವ ಕುರಿತು.

**ನಿರ್ಣಯ:**

ಸರ್ಕಾರದ ಪತ್ರ ಸಂಖ್ಯೆ: ಇಡಿ 32 ಯುಜಿವಿ 2020 ದಿನಾಂಕ: 11.02.2022ರಲ್ಲಿ, ಗುಲ್ಬರ್ಗಾ ವಿಶ್ವವಿದ್ಯಾಲಯವು 2014ರಲ್ಲಿ TATAZEST-XT (DIESEL) ಕಾರ್ ಅನ್ನು ಖರೀದಿ ಮಾಡಿದ್ದು ಆ ಅವಧಿಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಡಾ. ಸಿ. ಸೋಮಶೇಖರ್, ಇವರು ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸದೇ ಇರುವುದರಿಂದ, ಸದರಿಯವರ ವಿರುದ್ಧ ಸರ್ಕಾರದ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುವಂತೆ ಶಿಸ್ತು ಕ್ರಮ ಜರುಗಿಸುವುದನ್ನು ಕೈಬಿಡುವಂತೆ ಕೋರಲು ನಿರ್ದೇಶಿತನಾಗಿದ್ದೇನೆ ಎಂದು ತಿಳಿಸಿರುವುದರಿಂದ, ಮೇಲ್ಕಂಡ ವಿಷಯವನ್ನು ಹಿಂಪಡೆಯಲಾಗಿದೆ.

**ವಿಷಯ ಸಂಖ್ಯೆ 48:** ಡಾ. ಮಂಜೇಶ್, ಕಸ್ಟೋಡಿಯನ್, ಎಲೆಕ್ಟ್ರಾನಿಕ್ಸ್ ಸೈನ್ಸ್ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ರವರಿಗೆ ಹೆಚ್ಚುವರಿಯಾಗಿ ಮೌಲ್ಯಮಾಪನದ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಡಾ. ಮಂಜೇಶ್, ಕಸ್ಟೋಡಿಯನ್, ಎಲೆಕ್ಟ್ರಾನಿಕ್ಸ್ ಸೈನ್ಸ್ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇವರಿಗೆ ಮೌಲ್ಯಮಾಪನ ಕಾರ್ಯದಲ್ಲಿ 2,50,000 ಉತ್ತರ ಪತ್ರಿಕೆಗಳಿಗೆ ಅನ್ವಯವಾಗುವಂತೆ,

ಸಂಭಾವನೆ ನೀಡಿದ್ದು, ಆದರೆ ಅವರ ಮನವಿಯಲ್ಲಿ 3,15,656 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಿರುವುದಾಗಿ ದೃಢೀಕರಿಸಿರುವುದರಿಂದ, ಹೆಚ್ಚುವರಿಯಾಗಿ 65,656 ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳಿಗೆ ಅನ್ವಯವಾಗುವ ಸಂಭಾವನೆಯನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 49:** ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ (ತಾತ್ಕಾಲಿಕವಾಗಿ) ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ (ತಾತ್ಕಾಲಿಕವಾಗಿ) ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಇಬ್ಬರು ವೈದ್ಯಾಧಿಕಾರಿಗಳ ಸೇವೆಯನ್ನು ಮೂರು ಕಾರ್ಯ ನಿರತ ದಿನಗಳ ಬಿಡುವು ನೀಡಿ 20-12-2021ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಪ್ರಸ್ತುತ ಇರುವ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟು ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 50:** ಕು. ವಿದ್ಯಾ, ಸಿ.ಕೆ, ಸಾಫ್ಟ್‌ವೇರ್ ಡೆವಲಪರ್‌ರವರ ಸೇವೆಯನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**Item No.: 51:** Implementation of Plagiarism Checking tool-Shodaganga National Repository of Electronic Thesis and Dissertations

***Resolution:***

The Syndicate resolved to approve the fee structure as proposed in the agenda note for Plagiarism checking of Ph.D. thesis.

**ವಿಷಯ ಸಂಖ್ಯೆ 52:** ಶ್ರೀ ಎನ್.ಎಲ್. ಗೋವಿಂದಪ್ಪ, ಸಹಾಯಕರು, ವಿ.ವಿ ಗ್ರಂಥಾಲಯ ಇವರ ಅನಧಿಕೃತ ಗೈರುಹಾಜರಾತಿಯ ಬಗ್ಗೆ

**ನಿರ್ಣಯ:**

ಶ್ರೀ ಎನ್.ಎಲ್. ಗೋವಿಂದಪ್ಪ, ಸಹಾಯಕರು, ವಿ.ವಿ ಗ್ರಂಥಾಲಯ ಇವರು ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿರುವ ಕಾರಣ, ಅವರು ಅನಧಿಕೃತವಾಗಿ ಗೈರುಹಾಜರಾದ ದಿನಗಳಿಗೆ 22-12-2020 ರಿಂದ 18-04-2021ರ ವರೆಗೆ ಅವರ ಖಾತೆಯಲ್ಲಿನ ರಜೆಯನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

ವಿಷಯ ಸಂಖ್ಯೆ 53: ಶ್ರೀ ಎಂ. ಉದಯ ಕುಮಾರ್ ಮತ್ತು ಡಾ.ಹೆಚ್ ಸುಧಾಕರ್, ಸಿಂಡಿಕೇಟ್ ಸದಸ್ಯರುಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ದಿನಾಂಕ 30.09.2021 ರಲ್ಲಿ ಸಲ್ಲಿಸಿರುವ ಮನವಿಯ ಬಗ್ಗೆ.

ನಿರ್ಣಯ:

ಈ ವಿಷಯದ ಬಗ್ಗೆ ವಿಷಯ ಸಂಖ್ಯೆ 15ರಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

**Item No. 54:** Consideration of past service rendered by Dr. M.G Venkatesh, Professor (Rtd), Department of Zoology, BUB in Central Coffee Research Institute, Coffee Board, Government of India for pensionary benefit.

***Resolution:***

It was resolved to consider the past service rendered by Dr. M.G Venkatesh, Professor (Rtd), Department of Zoology, BUB in Central Coffee Research Institute, Coffee Board, Government of India as Research Assistant Grade-II from 12.01.1990 to 07.10.1998 for his pensionary benefits, in view of the fact that he had applied for the post of lecturer in Zoology, Bangalore University through proper channel.

**Item No. 55:** Implementation of Hon'ble High Court order to W.A No. 256/2021 filed by Dr. Parameshwar Pandit, Professor, Department of Statistics, BUB.

***Resolution:***

The Syndicate resolved to implement the Court directions in W.A No. 256/2021 filed by Dr. Parameshwar Pandit, Professor, Department of Statistics, Bangalore University, Bengaluru and to refer the matter to the scrutiny followed by selection committee to review his promotion by taking into consideration the past service rendered by him in Karnatak University.

**Item No. 56:** Permission to continue the service of Dr. K. Shivanna, Former Head, Isotope Hydrology, BARC, Mumbai as Consultant to Department of Civil Engineering, UVCE, BUB for another year.

***Resolution:***

The Syndicate resolved to continue the service of Dr. K. Shivanna, Former Head, Isotope Hydrology, BARC, Mumbai as Consultant to Department of Civil Engineering, UVCE, BUB for one more year to execute the research project at the Bangalore University on existing terms and conditions.

**Item No. 57:** Sanctioning of Office expenses to the Digital Valuation Unit, Examination branch, Bangalore University-reg.

***Resolution:***

The Syndicate resolved to sanction an amount of Rs.50,000/- on Advance Contingency bill to the Registrar (Evaluation) towards periodic maintenance of Scanners, Cutting machines, Computers and purchase of stationery articles for smooth conduct of digital valuation process at Digital Valuation Unit, Examination branch, Bangalore University.

**Item No. 58:** Ratification of the Expert committee constituted to examine the matter of discrepancy in marks for the undergraduate examinations held during September/October 2020, submitted by M/s. TRS Forms & Services (P) Ltd, Chennai and to examine the cases of discrepancies in the marks, purportedly indulged by the staff of Computer section, Examination branch, Bangalore University, Bengaluru and reported by the University to the jurisdictional police station and CID-reg.

***Resolution:***

The Syndicate resolved to ratify the action taken by the Bangalore University in constituting the Expert committee constituted to examine the matter of discrepancy in marks for the undergraduate examinations held during September/October 2020, submitted by M/s. TRS Forms & Services (P) Ltd, Chennai and to examine the cases of discrepancies in the marks, purportedly indulged by the staff of Computer section, Examination branch, Bangalore University, Bengaluru and reported by the University to the jurisdictional police station and CID.

**Item No. 59:** Consideration of the report of Syndicate Sub-Committee constituted with regard to sanction of admissible Travel grants to the teachers of University who have participated in International Conference /Seminars / Workshop and Symposium etc. held Abroad during 2018-19 & 2019-20

***Resolution:***

The Syndicate resolved to approve the report of the Syndicate Sub-Committee constituted with regard to sanction of admissible Travel grants to the teachers of Bangalore University for having participated in International Conference /Seminars / Workshop and Symposium etc. held Abroad during 2018-19 & 2019-20

**ವಿಷಯ ಸಂಖ್ಯೆ 60:** ಬೆಂಗಳೂರು ವಿಶ್ವವಿದ್ಯಾಲಯದ ಅಭಿಯಂತರರ ವಿಭಾಗದಲ್ಲಿ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಕ್ರೋಢೀಕೃತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ / ಕಿರಿಯ ಅಭಿಯಂತರರು (ಸಿವಿಲ್/ಎಲೆಕ್ಟ್ರಿಕಲ್)ಹಾಗೂ ಸೈಟ್ ಇಂಜಿನಿಯರ್ ರವರುಗಳ / ಸೇವೆಯನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ 61:** ಶ್ರೀ ಹೃತಿಕ್.ಟಿ, ದಿವಂಗತ ಶ್ರೀ ತಿಮ್ಮಪ್ಪ ವಿ, ಅಧೀಕ್ಷಕರು, ಸಿವಿಲ್ ಇಂಜಿನಿಯರಿಂಗ ವಿಭಾಗ ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ಮತ್ತು**

**ವಿಷಯ ಸಂಖ್ಯೆ 62:** ಶ್ರೀ ಧನುಷ್. ಹೆಚ್.ಬಿ, ದಿವಂಗತ ಶ್ರೀ ಬಸಪ್ಪ. ಹೆಚ್.ಎಸ್, ಹಿರಿಯ ಸಹಾಯಕರು, ಹಣಕಾಸು ವಿಭಾಗ ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ಮತ್ತು**

**ವಿಷಯ ಸಂಖ್ಯೆ 63:** ಶ್ರೀಮತಿ ಪದ್ಮಶ್ರೀ.ವಿ, ದಿವಂಗತ ಶ್ರೀನಿವಾಸ .ಕೆ, ಗ್ರೂಪ್ 'ಡಿ', ಅಭಿವೃದ್ಧಿ ವಿಭಾಗ ಇವರ ಪತ್ನಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:**

ಮೇಲ್ಕಾಣಿಸಿದ ವಿಷಯಗಳಿಗೆ ದಿನಾಂಕ: 18–01–2022ರ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಈಗಾಗಲೇ ನಿರ್ಣಯ ತೆಗೆದುಕೊಳ್ಳಲಾಗಿದೆ.

**Item No. 64:** To consider Institution of Endowment Cash Prize in the name of Chitra Bharadwaj working as D.E.O in Computer Section Examination Branch, Pariksha Bhavan in Bangalore University, Bangalore for awarding Cash Prize to a student securing higher marks property Law in Five Year B.A. LL.B (Honors Degree) Course.

***Resolution:***

The Syndicate resolved to Institute Endowment Cash Prize in the name of Chitra Bharadwaj, Bangalore for award of cash prize to a student securing highest marks in Property Law in Five Year B.A. LL.B (Honors Degree) Course out of the interest to be accrued on endowment amount of Rs.1,00,000/- as per section 29(2) of K.S.U. Act, 2000.

**ವಿಷಯ ಸಂಖ್ಯೆ 65:** ಪರೀಕ್ಷಾ ಕಾರ್ಯಕ್ಕೆ ವಾಹನಗಳನ್ನು ಬಾಡಿಗೆಗೆ ಪಡೆಯುವ ಬಗ್ಗೆ.

**ನಿರ್ಣಯ:**

ಮೆ. ಮಾರ್ಷಲ್ ಅಂಡ್ ಟ್ರಾವೆಲ್ಸ್ ಅವರಿಗೆ ಒಂದು ವರ್ಷಕ್ಕೆ ಪರೀಕ್ಷಾ ಕಾರ್ಯಗಳಿಗೆ ವಾಹನ ಬಾಡಿಗೆ ಪಡೆಯಲು ಹೊರಡಿಸಿರುವ ದಿನಾಂಕ:27-09-2021ರ ವಿಶ್ವವಿದ್ಯಾಲಯದ ಆದೇಶದಲ್ಲಿನ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. ಸದರಿ ಆದೇಶವನ್ನು ವಿಶ್ವವಿದ್ಯಾಲಯದ ಇತರೇ ಕಾರ್ಯಗಳಿಗೂ ಸಹ ಅನ್ವಯಿಸಬಹುದಾಗಿದೆ.

**ವಿಷಯ ಸಂಖ್ಯೆ 66:** ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಅಣುಕು ನ್ಯಾಯಾಲಯದ ಕೊಠಡಿಗೆ ಮತ್ತು ಕಾನೂನು ಸಲಹಾ ಕೊಠಡಿಗೆ ಪೀಠೋಪಕರಣಗಳನ್ನು ಖರೀದಿಸುವ ಬಗೆಗೆ.

**ನಿರ್ಣಯ:**

ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಅಣುಕು ನ್ಯಾಯಾಲಯದ ಕೊಠಡಿಗೆ ಮತ್ತು ಕಾನೂನು ಸಲಹಾ ಕೊಠಡಿಗೆ ಸದರಿ ಕಾಲೇಜಿನ ಪ್ರಾಂಶುಪಾಲರು ಕೋರಿರುವಂತೆ ರೂ.9,40,708/-ಗಳ ವೆಚ್ಚದಲ್ಲಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ (ನಿ) (KSFIC) ಅವರಿಂದ ಕೆ.ಟಿ.ಟಿ.ಪಿ. ಕಾಯ್ದೆ ಕಲಂ 4(ಜಿ)ರಡಿಯಲ್ಲಿ ಖರೀದಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 67:** ಬೆಂಗಳೂರು ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಆನ್-ಲೈನ್ ಮುಖಾಂತರ ಕೋರ್ಸುಗಳಿಗೆ 2021-22ನೇ ಸಂಯೋಜನೆಯನ್ನು ನೀಡುವಾಗ ವಿದ್ಯಾರ್ಥಿಗಳ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಶೇ 20% ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ.

**ನಿರ್ಣಯ:**

ಸರ್ಕಾರದ ಆದೇಶ ಸಂಖ್ಯೆ ಇಡಿ 227 ಯುಎನ್‌ಇ 2021, ಬೆಂಗಳೂರು ದಿನಾಂಕ: 16.09.2021ರ ಅನುಸಾರ ಸಂಯೋಜಿತ ಕಾಲೇಜುಗಳಿಗೆ ಪ್ರಸ್ತುತ ಕೋರ್ಸು/ಕಾಂಬಿನೇಷನ್ ವಾರು ಸ್ನಾತಕ ಪದವಿ ಕೋರ್ಸಿನ ಅನುಮೋದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಶೇ 20% ವಿದ್ಯಾರ್ಥಿ ಪ್ರಮಾಣವನ್ನು ಅನುಮೋದಿಸಲು ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ಹೊರಡಿಸಲಾಗಿರುವ ನಿರ್ದೇಶನದಂತೆ ಬಿ.ಎ/ಬಿ.ಎಸ್ಸಿ. ಕೋರ್ಸುಗಳ ವಿದ್ಯಾರ್ಥಿ ಪ್ರಮಾಣ ಮತ್ತು ಕೋರ್ಸು ಕಾಂಬಿನೇಷನ್‌ಗಳನ್ನು ನೂತನರಾಷ್ಟ್ರೀಯ ಶಿಕ್ಷಣ ನೀತಿ-2020ರನುಸಾರ ಶಿಸ್ತಿನ/ಮೂಲ ವಿಷಯಗಳನ್ನಾಗಿ (Discipline / Core subjects) ನಿಗದಿಪಡಿಸಲು ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 68:** ಕಾಲೇಜುಗಳ/ಸಂಸ್ಥೆಗಳಿಗೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ರಚಿಸಲ್ಪಟ್ಟ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಕುಲಪತಿಗಳ ಅಧ್ಯಕ್ಷತೆಯಲ್ಲಿನ ಪರಿಣಿತರ ಸಮಿತಿಯು ಕೆಳಕಂಡ ಕಾಲೇಜುಗಳ/ಸಂಸ್ಥೆಗಳಿಗೆ ಆನ್-ಲೈನ್ (Virtual) ಮೂಲಕ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ಪ್ರಕರಣ 66ರ ಅಡಿಯಲ್ಲಿ ಈ ಕೆಳಕಂಡ ಸಂಶೋಧನಾ ಕೇಂದ್ರಗಳ ಮುಂದೆ ನಮೂದಿಸಿರುವ ವಿಷಯ ಮತ್ತು ಸಾಲುಗಳಿಂದ ಹೊಸ ಮಾನ್ಯತೆ/ನವೀಕರಣದ ಬಗ್ಗೆ ವರದಿಗಳನ್ನು ವಿದ್ಯಾವಿಷಯಕ ಪರಿಷತ್ತಿನ ನಿರ್ಣಯದೊಂದಿಗೆ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

| ಕ್ರ.ಸಂ. | ಕಾಲೇಜು/ಸಂಸ್ಥೆ | ವಿಷಯ |
|---|---|---|
| 1. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು (ವರದಿ ದಿನಾಂಕ: 24-08-2021) | **ಕನ್ನಡ** (2020-21ನೇ ಸಾಲಿನಿಂದ ಮಾನ್ಯತೆ ನವೀಕರಣ ಶಿಫಾರಸ್ಸು ಮಾಡಲಾಗಿದೆ) |
| 2. | ಸೈಂಟ್ ಫ್ರಾನ್ಸಿ ಡಿ ಸೇಲ್ಸ್ ಕಾಲೇಜು, ಬೆಂಗಳೂರು (ವರದಿ ದಿನಾಂಕ: 25-08-2021) | **ವಾಣಿಜ್ಯ** (2021-22ನೇ ಸಾಲಿನಿಂದ ಹೊಸ ಮಾನ್ಯತೆಗೆ ಶಿಫಾರಸ್ಸು ಮಾಡಲಾಗಿದೆ) |
| 3. | ಆಚಾರ್ಯಾಸ್ ಬೆಂಗಳೂರು ಬಿ ಸ್ಕೂಲ್, ಬೆಂಗಳೂರು (ವರದಿ ದಿನಾಂಕ: 24-08-2021) | **ನಿರ್ವಹಣೆ** (2021-22ನೇ ಸಾಲಿನಿಂದ ಹೊಸ ಮಾನ್ಯತೆಗೆ ಶಿಫಾರಸ್ಸು ಮಾಡಲಾಗಿದೆ) |
| 4. | ಸೈಂಟ್ ಕ್ಲಾರೆಟ್ ಕಾಲೇಜು, ಬೆಂಗಳೂರು (ವರದಿ ದಿನಾಂಕ: 25-08-2021) | **ವಾಣಿಜ್ಯ** (2021-22ನೇ ಸಾಲಿನಿಂದ ಹೊಸ ಮಾನ್ಯತೆಗೆ ಶಿಫಾರಸ್ಸು ಮಾಡಲಾಗಿದೆ) |

**ವಿಷಯ ಸಂಖ್ಯೆ 69:** 2021-2022ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನಾ ನವೀಕರಣ /ಹೊಸ ಕೋರ್ಸಿನ ಸಂಯೋಜನೆ /ವಿದ್ಯಾರ್ಥಿ ಪ್ರಮಾಣದ ಹೆಚ್ಚಳ, ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನಾ ನವೀಕರಣ ಸ್ಥಳ/ಹೆಸರು ಬದಲಾವಣೆ ಹಾಗೂ ಹೊಸ ಕಾಲೇಜು ಸಂಯೋಜನೆಯ ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಗಳ ಅಧ್ಯಕ್ಷರು ಸಲ್ಲಿಸಿದ ವರದಿಗಳನ್ನು ಪರಿಗಣಿಸುವ ಬಗೆಗೆ.

***ನಿರ್ಣಯ:***

ಸದರಿ ವಿಷಯವು ಈಗಾಗಲೇ 19.01.2022ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.

**ವಿಷಯ ಸಂಖ್ಯೆ 70:** 2020-21ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ

***ನಿರ್ಣಯ:***

ಬೆಂಗಳೂರು ವಿಶ್ವವಿದ್ಯಾಲಯದ 2020-21ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಕೆ.ಎಸ್.ಯು. ಅಧಿನಿಯಮ ಪ್ರಕರಣ 32(3) (i) ಮತ್ತು 47(2)ರಂತೆ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 71** 2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಹಾಗೂ 2022-23 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸುವ ಬಗ್ಗೆ.

*ನಿರ್ಣಯ:*

ಬೆಂಗಳೂರು ವಿಶ್ವವಿದ್ಯಾಲಯದ 2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಹಾಗೂ 2022-23 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕೆ.ಎಸ್.ಯು. ಅಧಿನಿಯಮ ಪ್ರಕರಣ 48(1)ರ ಪ್ರಕಾರ ತಯಾರಿಸಲು ಕುಲಪತಿಗಳಿಗೆ ಸಿಂಡಿಕೇಟ್ ಅಧೀಕರಿಸಿತು.

**Item No. 72** Declaration of Probationary period of University Teachers appointed under Backlog Vacancy

***Resolution:***

The Syndicate resolved to declare the Probationary period of the following University Teachers appointed under Backlog Vacancies as satisfactory as per Rule(3) of KCSR of 1977 (Probationary Rules).

| Sl. No. | Name of the Teacher | Department | Date of duty report | Date of declation of probotionary |
|---|---|---|---|---|
| | | **PROFESSORS** | | |
| 1. | Dr. Jayaramappa N | Civil Engineering, UVCE | 25.07.2019 | 24.07.2021 |
| 2. | Dr. G. Krishna Murthy | Chemistry | 26.07.2019 | 25.07.2021 |
| 3. | Dr. H. Manjunatha | Biochemistry | 01.08.2019 | 31.07.2021 |
| 4. | | **ASSOCIATE PROFESSORS** | | |
| 5. | Dr. Shivaraj Y | Chemistry | 31.01.2020 | 30.01.2022 |
| 6. | Dr. Suresh | Statistics | 03.01.2020 | 02.01.2022 |
| 7. | Mr. D. Mallappa | Statistics | 01.01.2020 | 31.12.2021 |
| 8. | Mr. J. Murali | Architecture | 27.12.2019 | 26.12.2021 |
| 9. | Ms. Suchitra C.R. | Architecture | 30.12.2019 | 29.12.2021 |
| 10. | Sri. Ranganath M.N. | Architecture | 30.12.2019 | 29.12.2021 |
| 11. | Dr. Prathibavani P.M. | Computer Science & Engineering | 04.01.2020 | 03.01.2022 |
| 12. | Dr. Kumaraswamy S | Computer Science & Engineering | 27.12.2019 | 26.12.2021 |
| 13. | Dr. Sunil Kumar. G | Information Science & Engineering | 27.12.2019 | 26.12.2021 |
| 14. | Dr. Kumbinarasaiah. S | Mathematics | 03.01.2020 | 02.01.2022 |
| 15. | Dr. Sugantha Devi K | Mathematics | 02.01.2020 | 03.03.2022 |
| 16. | Dr. Boya Satyanaryana | Electronic Science | 30.12.2019 | 29.12.2021 |
| 17. | Mrs. Susheela K. Lenkennavar | Physics | 01.02.2020 | 31.01.2022 |
| 18. | Dr. Lakshmeesha. T.R. | Microbilogy | 27.12.2019 | 26.12.2021 |
| 19. | Mrs. Sowbhagya | Chemistry | 30.12.2019 | 16.01.2022 |
| 20. | Dr. Surendra P | Geography | 27.12.2019 | 26.12.2021 |
| 21. | Smt. Sowmya Shree K.N. | Psychology | 27.12.2019 | 26.12.2021 |
| 22. | Ms. Navaneetha Hombali B.L. | Civil Engineering UVCE | 30.12.2019 | 29.12.2021 |
| 23. | Dr. Pol Anupama | Urdu | 30.12.2019 | 29.12.2021 |
| 24. | Dr. Chaitra Nagammanavar | English | 30.12.2019 | 05.02.2022 |
| 25. | Dr. S. Shivanna | Performing Arts | 27.12.2019 | 26.12.2021 |

| | | | | |
|---|---|---|---|---|
| 26. | Dr. Venkataramanappa | Sociology | 27.12.2019 | 26.12.2021 |
| 27. | Dr. Veda C.V. | Social Work | 27.12.2019 | 26.12.2021 |
| 28. | Dr. D.K. Prabhakar | Telugu | 27.12.2019 | 26.12.2021 |
| 29. | Dr.Ramesh H Kittur | Physical Education | 30.12.2019 | 29.12.2021 |
| 30. | Dr. Vanishree Koppad | Education | 03.01.2020 | 02.01.2022 |

**ವಿಷಯ ಸಂಖ್ಯೆ 73:** ದಿನಾಂಕ 24.09.2018 ರಂದು ಜರುಗಿದ 143ನೇ ಸಿಂಡಿಕೇಟ್ ಸಭೆಯ ನಡಾವಳಿಗಳಿಗೆ (SAP Programme) ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು ಮತ್ತು 6 ರಂತೆ ವರದಿ ಸಲ್ಲಿಸುವ ಬಗ್ಗೆ.

*ನಿರ್ಣಯ:*

(SAP Programme) ಬಗ್ಗೆ ಪರಾಮರ್ಶಿತ ಟಿಪ್ಪಣಿಯಲ್ಲಿ ಲಗತ್ತಿಸಿರುವ ವರದಿಯನ್ನು ಹಾಗೂ ಲೆಕ್ಕ ಪರಿಶೋಧಕರು ಸಲ್ಲಿಸಿರುವ ಅಕ್ಷೇಪಣೆಗಳಿಗೆ ಅಂದಿನ ಕುಲಸಚಿವರು ಮತ್ತು ನಿರ್ದೇಶಕರು ಸಲ್ಲಿಸಿರುವ ಸಮಜಾಯಿಷಿಯ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಅಪರ ನಿರ್ದೇಶಕರು, ಕರ್ನಾಟಕ ಲೆಕ್ಕ ಪರಿಶೋಧನಾ ಇಲಾಖೆ ಇವರಿಗೆ ಕಳುಹಿಸಿಕೊಟ್ಟಿರುವ ಪತ್ರಗಳನ್ನು ಗಮನಿಸಿತು ಹಾಗೂ ಈ ಬಗ್ಗೆ ಅಧ್ಯಯನ ವಿಭಾಗಗಳು ಯಾವುದೇ ಸಂಸ್ಥೆಯೊಂದಿಗೆ ಒಪ್ಪಂದ ಮತ್ತು ಹಣಕಾಸು ವ್ಯವಾಹರಗಳು ಇದ್ದಲ್ಲಿ ಸಿಂಡಿಕೇಟ್ ಪೂರ್ವಾನುಮೋದನೆಯನ್ನು ಕಡ್ಡಯವಾಗಿ ಪಡೆಯಲು ಸೂಚಿಸಿತು.

**ವಿಷಯ ಸಂಖ್ಯೆ 74:** ಶ್ರೀ ಎಸ್. ನಾರಾಯಣಪ್ಪ ಗ್ರೂಪ್ 'ಡಿ' ಸಂಖ್ಯಾಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇವರಿಗೆ (Swelling in (L) Scrotum) ಶಸ್ತ್ರ ಚಿಕಿತ್ಸೆಗೆ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಬಗ್ಗೆ.

*ನಿರ್ಣಯ:*

ಶ್ರೀ ಎಸ್. ನಾರಾಯಣಪ್ಪ ಗ್ರೂಪ್ 'ಡಿ' ಸಂಖ್ಯಾಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇವರಿಗೆ (Swelling in (L) Scrotum) ಶಸ್ತ್ರ ಚಿಕಿತ್ಸೆಗೆ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚ ರೂ.50,825/–ಗಳನ್ನು ಮರುಪಾವತಿಸಲು ಅನುಮೋದಿಸಿತು.

**ವಿಷಯ ಸಂಖ್ಯೆ 75:** ಶ್ರೀ ಕೆ. ರಾಮಮೂರ್ತಿ, ಸಮನ್ವಯಾಧಿಕಾರಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರರವರ ತಾತ್ಕಾಲಿಕ ಗುತ್ತಿಗೆ ಇವರ ಸೇವಾವಧಿಯನ್ನು ಮುಂದುವರೆಸುವ ಬಗ್ಗೆ.

*ನಿರ್ಣಯ:*

ಶ್ರೀ ಕೆ. ರಾಮಮೂರ್ತಿ, ಸಮನ್ವಯಾಧಿಕಾರಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರರವರ ತಾತ್ಕಾಲಿಕ ಇವರ ಸೇವಾವಧಿಯನ್ನು ದಿನಾಂಕ: 26.08.2021ರಿಂದ 25.08.2022ರ ವರೆಗೆ ಮುಂದುವರೆಸಿರುವ ಹಾಗೂ ಇವರಿಗೆ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 76** ಶ್ರೀಮತಿ ಆಯಿಶ, ದಿವಂಗತ ಶ್ರೀ ಜಾವಿದ್ ಖಾನ್, ಗ್ರೂಪ್ 'ಡಿ' ಅಭಿಯಂತರರ ವಿಭಾಗ, ಇವರ ಪತ್ನಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ದಿವಂಗತ ಶ್ರೀ ಜಾವಿದ್ ಖಾನ್, ಗ್ರೂಪ್ 'ಡಿ' ಅಭಿಯಂತರರ ವಿಭಾಗ, ಇವರ ಪತ್ನಿ ಶ್ರೀಮತಿ ಆಯಿಶ, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ನಿರ್ಣಯಿಸಿತು.

**ವಿಷಯ ಸಂಖ್ಯೆ 77** ನಾಲ್ಕನೇ ದರ್ಜೆ ನೌಕರರಿಗೆ "ಅನುಚರ" ಹುದ್ದೆಗೆ ಪದೋನ್ನತಿ ನೀಡಿರುವ ಆದೇಶವನ್ನು ಅನುಸಮರ್ಥಿಸುವ (Ratification) ಬಗ್ಗೆ.

*ನಿರ್ಣಯ:*

ವಿಶ್ವವಿದ್ಯಾಲಯ ಆದೇಶ ಸಂಖ್ಯೆ: ಸಿಬ್ಬಂದಿ–1/ಇ4/337/1991 (ಭಾಗ–3) ದಿನಾಂಕ: 29–12–2021ರಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 42 ನಾಲ್ಕನೇ ದರ್ಜೆ ನೌಕರರಿಗೆ ಖಾಲಿ ಇರುವ "ಅನುಚರ" ಹುದ್ದೆಗೆ ಪದೋನ್ನತಿ ನೀಡಿರುವ ಆದೇಶವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 78** ಶ್ರೀ ಹೆಚ್. ವಿಶ್ವನಾಥ್, ಪ್ರಥಮ ದರ್ಜೆ ಭೂಮಾಪಕರು (ನಿವೃತ್ತಿ), ಕನ್ಸಲ್‌ಟೆಂಟ್ ಸರ್ವೇಯರ್ ಬೆಂಗಳೂರು ವಿಶ್ವವಿದ್ಯಾಲಯ ಇವರ ಸಮಾಲೋಚನೆ ಶುಲ್ಕವನ್ನು ಪರಿಷ್ಕರಿಸುವ ಅಥವಾ ವಾಹನ ಭತ್ಯೆಯನ್ನು (Conveyance Allowance) ಮಂಜೂರು ಮಾಡುವ ಬಗ್ಗೆ.

*ನಿರ್ಣಯ:*

ಶ್ರೀ ಹೆಚ್. ವಿಶ್ವನಾಥ್, ಪ್ರಥಮ ದರ್ಜೆ ಭೂಮಾಪಕರು (ನಿವೃತ್ತಿ), ಕನ್ಸಲ್‌ಟೆಂಟ್ ಸರ್ವೇಯರ್ ಬೆಂಗಳೂರು ವಿಶ್ವವಿದ್ಯಾಲಯ ಇವರ ಸಮಾಲೋಚನೆ ಶುಲ್ಕವನ್ನು (Conveyance Allowance) ಮಾಹೆಯಾನ ರೂ.35,000/– ರಿಂದ ರೂ.40,000/–ಕ್ಕೆ ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 79** ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಡಾ. ಡೊಮಿನಿಕ್.ಡಿ, ಇವರನ್ನು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ, ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಲಾಗಿ ಸರ್ಕಾರದ ಆದೇಶದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸುವ ಬಗ್ಗೆ.

*ನಿರ್ಣಯ:*

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಡಾ. ಡೊಮಿನಿಕ್.ಡಿ, ಇವರನ್ನು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ, ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕ

ಮಾಡಲಾದ ಸರ್ಕಾರದ ಆದೇಶದಂತೆ ನಿಯೋಜನೆ ಮೇರೆಗೆ ವಿಶ್ವವಿದ್ಯಾಲಯದ ಆದೇಶ ದಿನಾಂಕ: 01-01-2022ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**ವಿಷಯ ಸಂಖ್ಯೆ 80:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಕ್ಕೆ ಅಧ್ಯಕ್ಷರು ಮತ್ತು ಸಂಯೋಜಕರನ್ನು ನೇಮಕ ಮಾಡುವ ಬಗ್ಗೆ.

*ನಿರ್ಣಯ:*

ಈ ಕೆಳಕಂಡ ವಿಭಾಗಗಳಿಗೆ ಆ ವಿಭಾಗಗಳಿಗೆ ಎದುರಾಗಿ ನಮೂದಿಸಿರುವ ಶಿಕ್ಷಕರುಗಳನ್ನು ಎರಡು ವರ್ಷಗಳ ಅವಧಿಗೆ ವಿಶ್ವವಿದ್ಯಾಲಯವು ಆದೇಶ ಹೊರಡಿಸುವ ದಿನಾಂಕದಿಂದ ಅಧ್ಯಕ್ಷರನ್ನಾಗಿ / ಕೋ-ಆರ್ಡಿನೇಟರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ವಿಭಾಗ/ವಿಷಯ | ಶಿಕ್ಷಕರ ಹೆಸರು |
|---|---|---|
| 1. | ಶಿಕ್ಷಣ ವಿಭಾಗ | ಪ್ರೊ. ಎಂ. ನಾರಾಯಣಸ್ವಾಮಿ |
| 2. | ಕನ್ನಡ ಅಧ್ಯಯನ ಕೇಂದ್ರ ನಿರ್ದೇಶಕರು | ಪ್ರೊ. ಮುನಿಯಪ್ಪ (ಡಾ. ಹೆಚ್.ಎಲ್. ನಟರಾಜು ಅವರು ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಒಪ್ಪದ ಕಾರಣ) |
| 3. | ಜೀವ ವಿಜ್ಞಾನ ವಿಭಾಗ | ಪ್ರೊ. ಕೆ. ಶಿವಶಂಕರ್ |
| 4. | ಮಹಿಳಾ ಅಧ್ಯಯನ ಕೇಂದ್ರ | ಡಾ. ಸಿದ್ದಪ್ಪ ಎಂ, ಸಹ ಪ್ರಾಧ್ಯಾಪಕರು |
| 5. | ಸಿವಿಲ್ ಇಂಜಿನಿಯರಿಂಗ್ | ಪ್ರೊ. ಎಲ್. ಮಂಜೇಶ್ |
| 6. | ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗ | ಪ್ರೊ. ಹೆಚ್.ಎಸ್. ವಿಮಲಾ, |
| 7. | ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ | ಪ್ರೊ. ಸಿ.ಕೆ. ಉಮೇಶ್ |

**Item No. 81** Proceedings of the 2nd and 3rd meeting of the Committee for acceptance and approval of the Lowest Tenders Notified by the Engineering Division, Bangalore University held on 25th November 2021 & 4th January 2022.

**Resolution:**

The Syndicate resolved to approve the proceedings of the 2nd and 3rd meeting of the Committee for acceptance and approval of the Lowest Tenders Notified by the Engineering Division, Bangalore University held on 25th November 2021 & 4th January 2022 and ratified the action taken on the said proceedings.

**ವಿಷಯ ಸಂಖ್ಯೆ 82** ವಿದ್ಯಾರ್ಥಿನಿಲಯಗಳ ಸುಧಾರಣಾ ಸಮಿತಿ ಸಭೆಯ ನಡಾವಳಿಯಲ್ಲಿ ಮುಂದೂಡಲ್ಪಟ್ಟ ವಿಷಯಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ : 83** 2020–21ನೇ ಸಾಲಿನ ಅನುದಾನ 2021–22 ರಲ್ಲಿ ಉಪಯೋಗಿಸಲು ಅನುಮೋದಿಸುವ ಬಗ್ಗೆ.

***ನಿರ್ಣಯ:***

ಸಧ್ಯದಲ್ಲೇ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಮರು–ಮೌಲ್ಯಮಾಪನಕ್ಕೆ ಸಮಿತಿ ಬರುವುದರಿಂದ 2020–21ನೇ ಸಾಲಿನಲ್ಲಿ ಪುಸ್ತಕಗಳು ನಿಯತಕಾಲಿಕಗಳು ಮತ್ತು ಇ–ಸಂಪನ್ಮೂಲಗಳ ಖರೀದಿ ಸಂಬಂಧ ಸಲ್ಲಿಸಿರುವ ಬಿಲ್ಲಿನ ಮೊತ್ತವನ್ನು ಪಾವತಿಸಲು ಕಳೆದ ಸಾಲಿನಲ್ಲಿ ಸದರಿ ಖರೀದಿಗೆ ಮೀಸಲಿರಿಸಿದ್ದ ಲೆಕ್ಕ ಶೀರ್ಷಿಕೆಯಡಿ ವಿನಿಯೋಗಿಸದೆ ಇರುವ ಮೊತ್ತವನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಉಪಯೋಗಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 84:** ದಿನಾಂಕ 30.12.2021 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯ ಅನುಮೋದನೆ ಬಗ್ಗೆ.

***ನಿರ್ಣಯ:***

ದಿನಾಂಕ 30.12.2021 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 85** ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಿರುವುದಕ್ಕೆ ಹಣ ಮಂಜೂರು ಮಾಡುವ ಬಗ್ಗೆ.

***ನಿರ್ಣಯ:***

ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ 2019–20 ಮತ್ತು 2020–21ನೇ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ. ಪ್ರವೇಶ ಪಡೆದಿರುವ 09 ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಅವರು ಪ್ರವೇಶ ಪಡೆದ ದಿನಾಂಕದಿಂದ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 86** ಅಂಧ ವಿದ್ಯಾರ್ಥಿಗಳ ಮಾಸಿಕ ವಿದ್ಯಾರ್ಥಿವೇತನವನ್ನು ಹೆಚ್ಚಿಸುವ ಬಗ್ಗೆ.

*ನಿರ್ಣಯ:*

ಪರಾಮರ್ಶಿತ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ವಿಶ್ವವಿದ್ಯಾಲಯ ಹಾಗೂ ವಿವಿಧ ಸಂಯೋಜಿತ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ದಿವ್ಯಾಂಗ ಪದವಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವಾರ್ಷಿಕ ವೇತನವನ್ನು ರೂ.5,000/- ದಿಂದ ರೂ.12,000/-ಗಳಿಗೆ ಹಾಗೂ ಸ್ನಾತಕೋತ್ತರ ದಿವ್ಯಾಂಗ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ರೂ.6,000/- ದಿಂದ ರೂ.15,000/-ಗಳಿಗೆ ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 87** ಶ್ರೀಮತಿ ಅಪರ್ಣ ಶಂಕರ್, ಬೆರಳಚ್ಚುಗಾರರು ವಿವಿ ಮುದ್ರಣಾಲಯ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ಇವರಿಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 9407/2014 ಮತ್ತು 9372/2014 ರ ಆದೇಶ ದಿನಾಂಕ 16.07.2021 ರನ್ವಯ ಇವರ ಸೇವಾ ಸಕ್ರಮಾತಿಯನ್ನು ಮಾರ್ಪಡಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ಕುಲಪತಿಯವರು**